ಅವನ ಬಾಯಲ್ಲಿ ಸಿಗರೇಟಿನ ವಾಸನೆ. ಥೇಟು ಮೃಗ. ಕಾತ್ಯಾಯಿನಿಯ ಎದೆಯನ್ನು ಹಿಂಡಿದ್ದ ರಭಸವೂ ಹಾಗಿತ್ತು. ಅವಳ ಜೀವನದಲ್ಲಿ ಆ ರಾತ್ರಿ ಮತ್ತೆ ಚೋಮನ ನೆನಪು ಬಂದಿತು. ಎಷ್ಟೋ ವರ್ಷಗಳ ಹಿಂದೆ ಆಗಿ ಹೋಗಿದ್ದ ಘಟನೆಯು ಮತ್ತೆ ಮನಸ್ಸಿನ ಸಮುದ್ರದಿಂದ ಎದ್ದು ಬಂದಿತು. ಅವಳು ಬರಬಾರದು ಎಂದು ಹೇಳಿದರೂ ಬಾರದಿರುವುದು ಸಾಧ್ಯವಿರಲಿಲ್ಲ. ಅದರ ಅರಿವು ರಾಹುಲನಿಗೆ ಗೊತ್ತಾಗುವುದು ಹೇಗೆ? ಅವನಿಗೆ ಅವಳು ಹೆಂಡತಿ. ಅವಳ ದೇಹ ಅವನದು. ಅವನಿಗೆ ಆ ಘಳಿಗೆಯಲ್ಲಿ ಅಷ್ಟು ಮಾತ್ರವೇ ಗೊತ್ತು. ಆಚಾರದಲ್ಲಿ ಒಂದಿಂಚೂ ಸರಿಯದ ಜೋಯಿಸರ ಮಗಳು ಕಾತ್ಯಾಯಿನಿ. ತಾನು ಈವತ್ತು ಮೃಗಕ್ಕೆ ಬಲಿಯಾದೆ ಎಂದುಕೊಂಡಳು. ಅವಳ ಮನಸ್ಸಿನಲ್ಲಿ ಮತ್ತೆ 'ಪೆಣ್ಣಾಗಿ ಪುಟ್ಟಿದೆನ್ನಯ ದೋಷಂ' ಪದ್ಯ ಕಾಡುತ್ತದೆ ಬೆಂಬಿಡದೆ. ಮತ್ತೊಂದು ಕಡೆಯಲ್ಲಿ ಲೇಡಿ ಮ್ಯಾಕ್‌ಬೆತ್. ಎಲ್ಲಾ ಮುಗಿದ ಮೇಲೆ ಕಾತ್ಯಾಯಿನಿ ರಾಹುಲನ ಕಣ್ಣಲ್ಲಿ ಕಣ್ಣಿಟ್ಟು ಒಂದು ಮಾತು ಹೇಳಿದಳು 'ನೀವೇನು ಹಂದಿಯಾ' ತಟಕ್ಕನೆ ಬಂದ ಮಾತದು. ಡಾ.ರಾಹುಲ- ಅದೂ ಲಕ್ಮೀಶನ ಕಾವ್ಯವನ್ನು ಅರಗಿಸಿಕೊಂಡವನು. ಕೇಳಿಸಿಕೊಂಡ. ತಟಕ್ಕನೆ ಕೆನ್ನೆಗೆ ಹೊಡೆದಂತೆ, ಹೆಂಡತಿಯ ಎದುರು ಪಾಪಕ್ಕೆ ಸಿಕ್ಕಿದವನಂತೆ ಚಡಪಡಿಸಿ 'ಸಾರಿ ಕಾತ್ಯಾಯಿನಿ' ಎಂದ. ಅವಳು ನಿಲ್ಲಿಸಲಿಲ್ಲ. 'ನಿಮಗೆ ಬೇಕಾದ್ದು ಈ ದೇಹ, ನನ್ನ ಮನಸ್ಸು ಅಲ್ಲ, ನೀವು ಗಂಡಸರೇ ಹೀಗೆ. ನಿಮ್ಮ ಜನ್ಮಕ್ಕೆ ಯಾವತ್ತೂ ಹೆಣ್ಣು ಅರ್ಥ ಆಗುವುದು ಸಾಧ್ಯವೇ ಇಲ್ಲ' ಎಂದು ಸೀರೆಯನ್ನು ಉಟ್ಟುಕೊಂಡು ಮುಖ ತೊಳೆಯಲು ಹೋದಳು. ಅವಳ ಮೈಯಿಡೀ ಅದೇ ವಾಸನೆ. ಎರಡೆರಡು ಬಾರಿ ಸೋಪ್ ಹಾಕಿ ಮುಖವನ್ನು ತೊಳೆದುಕೊಂಡಳು. ಅಳು ಮತ್ತು ಸಿಟ್ಟು ಎರಡೂ ಬಂತು. ಈಜಬೇಕು. ಅದು ತಾನು ಕಲಿತ ವಿದ್ಯೆ. ಯಾಕೆ ಅಳಬೇಕು ಎಂದು ಅನಿಸಿತು. ಯಾಕೋ ಮತ್ತೊಮ್ಮೆ ಮುಖವನ್ನು ತೊಳೆಯಬೇಕು ಎಂದು ಅನಿಸಿತು. ತೊಳೆದು ಕಣ್ಣೊರಸಿ ಮತ್ತೆ ರೂಮಿಗೆ ಬಂದಳು. ಅವಳು ಬರುವಾಗ ರಾಹುಲ ಮಾತ್ರ ಅಲ್ಲಿ ಇರಲಿಲ್ಲ. ಹೊರಗೆ ಹೋಗಿ ಜಗುಲಿಯನ್ನು ಮೆಲ್ಲನೆ ದಾಟಿ ಮನೆಯ ಅಂಗಳದಲ್ಲಿರುವ ಹಲಸಿನ ಮರದ ಬೇರಿನ ಮೇಲೆ ಕುಳಿತುಕೊಂಡು ಸಿಗರೇಟು ಸೇದಿದ. ಅವನಿಗೆ ಏನು ಗೊತ್ತು – ಚೋಮನೂ ಬೀಡಿ ಸೇದಿದ್ದ ಎಂದು. ಅಥವಾ ಚೋಮನ ಬೀಡಿಯ ವಾಸನೆಯು ಕಾತ್ಯಾಯಿನಿಯ ನೆನಪಿನ ಅಂಗಳದಲ್ಲಿ ಒಂದು ಶಾಶ್ವತವಾದ ಸಹಿಯನ್ನು ಹಾಕಿತ್ತು ಎಂದು. ವಿಷಮ ದಾಂಪತ್ಯಕ್ಕೆ ಮೊದಲ ದಿನವೇ ಮುನ್ನುಡಿಯನ್ನು ಬರೆಯಿತು. ಆ ಮೇಲೆ ಆರು ತಿಂಗಳು ಅವರಿಬ್ಬರು ಹೇಗೆ ಕಳೆದರೋ ಗೊತ್ತಿಲ್ಲ. ಮರುದಿನವಿಡೀ ಕಾತ್ಯಾಯಿನಿ ಮಾತೇ ಆಡಿಲ್ಲ. ಅವನೂ ಅಷ್ಟೇ- ಅವನಿಗೂ ಮಾತು ಬೇಕಿರಲಿಲ್ಲ. ಅದರ ಅನಂತರ ಆರು ತಿಂಗಳಲ್ಲಿ ರಾಹುಲ ಅವಳನ್ನು ಮುಟ್ಟಿದ್ದು ಲೆಕ್ಕ ಮಾಡಿ ಒಟ್ಟು ನಾಲ್ಕು ಬಾರಿ. ಅದೂ ವಿಷಮವಾದ ಸ್ಥಿತಿಯಲ್ಲಿ. ಅದು ಅವಳ ಹೆಗಲನ್ನು ಮುಟ್ಟಿದ್ದು. ಅವಳು ಥಟ್ಟನೆ ತಿರುಗಿ ನೋಡಿ, 'ನಿಮಗೆ ಬೇಕಾದ್ದು ಅದು ಅಲ್ಲವಾ? ಬೇಕಾದ್ದು ಮಾಡಿ' ಎಂದು ಸೀರೆಯನ್ನು ಬಿಚ್ಚಿ ಹಾಕಿ ಹಾಸುಗೆಯ ಮೇಲೆ ಬಿದ್ದಳು. ಮುತ್ತಿಡಲು ಹೊರಟರೆ, 'ಥೂ ಅಸಹ್ಯ ಗಬ್ಬು. ಅದನ್ನು ಬಿಟ್ಟು ಅದೇನು ಬೇಕೋ ಅದನ್ನು ಮಾಡಿ ಅಷ್ಟೆ! ನೀವು ಗಂಡಸರು ಇಷ್ಟೇ- ನಿಮಗೆ ಬೇಕಾದ್ದು ಅದು ತಾನೆ?' ರಾಹುಲನಿಗೆ ಮತ್ತೆಲ್ಲಾ ಜಡ. ಯಾಂತ್ರಿಕ. ಮಾಡಿದ ಮೇಲೆ ಎದೆಯಾಳದಲ್ಲಿ ಸಣ್ಣನೆಯ ನೋವು ಕಾಡಲು ಶುರು ಮಾಡಿತು ತಂದೆ- ತಾಯಿ ಇರುವವರು ಗರುಡ ಪುರಾಣವನ್ನು ಓದಬಾರದು ಎಂದು ಹೇಳುತ್ತಾರೆ. ಶಾಸ್ತ್ರಿಗಳು ಕನ್ನಡಕ್ಕೆ ಅನುವಾದವನ್ನು ಮಾಡಿದ ಗರುಡ ಪುರಾಣದಲ್ಲಿ ಬರುತ್ತದೆ. 'ಪಾಪಿಯ ಜೀವಾತ್ಮವು ಕುದಿಯುವ ವೈತರಣಿ ನದಿಯನ್ನು ದಾಟಬೇಕು, ಕುದಿಯುವ ಎಣ್ಣೆಯಲ್ಲಿ ಕೈಯನ್ನು ಹಾಕಬೇಕು' ಅದನ್ನು ಡಿಗ್ರಿಯಲ್ಲಿ ತಂದೆ ತಾಯಿಗೆ ಗೊತ್ತಾಗದಂತೆ ರಾಹುಲ ಓದಿದ್ದಾನೆ. 'ಬ್ರಹ್ಮಚರ್ಯವೇ ಜೀವನ, ವೀರ್ಯ ನಾಶವೇ ಮೃತ್ಯು' ಕೃತಿಯನ್ನು ಓದುತ್ತಾ ನಗಾಡಿದ್ದ. ವಾತ್ಸಾಯನನ ಕಾಮಸೂತ್ರವನ್ನು ಎರಡು ಬಾರಿ ಓದಿ ಕರಗತ ಮಾಡಿದ್ದಾನೆ. 'ಇಂದ್ರಿಯ ನಿಗ್ರಹವನ್ನು ಮಾಡುವುದು ಮಾಡಲಾರೆ. ಅದು ಮತ್ತೆಮತ್ತೆ ಬೇಕು ಎಂದು ಹೇಳುತ್ತದೆ. ಹೆಂಡತಿಯ ಸಂಗವನ್ನು ಬಿಟ್ಟು ಇರುವುದು ಅಂದರೆ ಕಷ್ಟ. ಆದರೆ ಕಾತ್ಯಾಯಿನಿಯ ಧೋರಣೆಯು ಅವನಿಗೆ ಬಾಯಾರಿದ ಗಂಟಲಿಗೆ ತುಪ್ಪವನ್ನು ಸುರಿದಂತೆ ಆಗಿದೆ. ಆದರೂ ಅದನ್ನು